ದಿನಾಂಕ 26-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮೇಡಮ್ ಎಸ್ ಎಸ್ ವಕೀಲರವರಿಂದಃ**

ನಾನು ಅರ್ಜಿದಾರರ ಪರ ಸಾಕ್ಷಿದಾರನಾಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 17 ಎಂದು, 05 ಎಕ್ಸ್ರೇ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.18 ಎಂದು ಗುರುತಿಸಲಾಯಿತು. ಅರ್ಜಿದಾರರಿಗೆ ನೀಡಿದ ಚಿಕಿತ್ಸೆಯ ಪ್ರಮಾಣಪತ್ರವನ್ನು ನೀಡಿರುತ್ತೇನೆ ಅದನ್ನು ಈಗಾಗಲೇ ನಿಪಿ 11 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.11(ಎ) ಎಂದು, ಅರ್ಜಿದಾರರ ಅಂಗನ್ಯೂನತಾ ಪ್ರಮಾಣ ಪತ್ರ ವನ್ನು ನೀಡಿರುತ್ತೇನೆ. ಅದನ್ನು ಈಗಾಗಲೇ ನಿಪಿ 12 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರವಾಗಿ ಶ್ರೀ ಡಿ. ಬಿ. ಎಸ್ ವಕೀಲರಿಂದಃ**

ಅರ್ಜಿದಾರರು ನೀವು ನೀಡಿದಂತಹ ಚಿಕಿತ್ಸೆಗೆ ಸ್ವಂದಿಸಿರುತ್ತಾರೆ ಅಲ್ಲವೇ ಎಂದರೆ ಹೌದು. ಅರ್ಜಿದಾರರಿಗೆ ಆಗಿದೆ ಎಂದು ಹೇಳುವ ಮೂಳೆ ಮುರಿತಗಳು ಸರಿಯಾಗಿ ಮತ್ತು ಸಂಪೂರ್ಣವಾಗಿ ಕೂಡಿಕೊಂಡಿವೆ ಎಂದರೆ ಸರಿ. ಅರ್ಜಿದಾರರಿಗೆ ಮೂಳೆಯು ನಷ್ಟವಾಗಿರುವುದಿಲ್ಲ ಎಂದರೆ ಹೌದು. ಅರ್ಜಿದಾರರರಿಗೆ ಯಾವುದೇ ಒಳ ಸಾಧನವನ್ನು ಅಳವಡಿಸಿರುವುದಿಲ್ಲ ಎಂದರೆ ಅಳವಡಿಸಿರುತ್ತೇನೆ. ಅರ್ಜಿದಾರರ ಚಿಕಿತ್ಸೆ ಯು ಸಂಪೂರ್ಣ ಮುಗಿದಿದೆ ಎಂದರೆ ಒಳ ಸಾಧನವನ್ನು ತೆಗೆಯುವುದನ್ನು ಹೊರತು ಪಡಿಸಿ ಬೇರೆ ಚಿಕಿತ್ಸೆ ಮುಗಿದಿದೆ. ಒಳ ಸಾಧನವನ್ನು ತೆಗೆಸುವುದು ಅರ್ಜಿದಾರರ ಇಚ್ಛೆಗೆ ಬಿಟ್ಟ ವಿಚಾರ ಎಂದರೆ

ಹೌದು. ಸಾಕ್ಷಿಯವರು ಮುಂದುವರಿದು ಇಂಪ್ಲಾಂಟ್ ತಯಾರಿಸುವ ಕಂಪನಿಯವರು ತೆಗೆಯಲು ಸೂಚಿಸುತ್ತಾರೆ. ಕಡ್ಡಾಯವಾಗಿ ನೀಡಲೇ ಬೇಕಾದ ಚಿಕಿತ್ಸೆಯ ಬಗ್ಗೆ ಆಸ್ಪತ್ರೆಯ ಕೇಸ್ ಶೀಟ್ ನಲ್ಲಿ ಹಾಗೂ ಆಸ್ಪತ್ರೆ ಬಿಡುಗಡೆ ಪತ್ರದಲ್ಲಿ ನಮೂದು ಮಾಡುತ್ತೀರಿ ಎಂದರೆ ಹೌದು.

ಅರ್ಜಿದಾರರರಿಗೆ ಅಳವಡಿಸಿರುವ ಒಳ ಸಾಧನವನ್ನು ತೆಗೆಯವುದು ಅಗತ್ಯವಿದೆ ಎಂದು ಕೇಸ್ ಶೀಟ್ನಲ್ಲಿ ಹಾಗೂ ಆಸ್ಪತ್ರೆ ಬಿಡುಗಡೆ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಹೌದು. ಅರ್ಜಿದಾರರ ಉದ್ಯೋಗವನ್ನು ಆಧರಿಸಿ ಅಂಗನ್ಯೂನತೆಯನ್ನು ನಿರ್ದರಣೆ ಮಾಡಿರುವುದಿಲ್ಲ ಎಂದರೆ ಹೌದು. ಅರ್ಜಿದಾರರಿಗೆ ನೀವು ಹೇಳಿರುವಂತಹ ಅಂಗನ್ಯೂನತೆಯು ಇರುವುದಿಲ್ಲ ಹಾಗೂ ಮುಂದಿನ ಚಿಕಿತ್ಸೆ ಯು ಅಗತ್ಯವಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ.ಹಿ.ಸಿ.ನ್ಯಾ ಉಡುಪಿ.